

# ಹಾಲ್‌ಸ್ಟಾಟ್
## ಅಸೀಮ ಸೌಂದರ್ಯದ ಆ ಹಳ್ಳಿ

**ಸೌಂದರ್ಯದ ಪರಿಭಾಷೆಯಂತಿರುವ 'ಹಾಲ್‌ಸ್ಟಾಟ್' ಆಸ್ಟ್ರಿಯಾದ ಪುಟ್ಟ ಹಳ್ಳಿ, ವಿಶ್ವದ ಮೊದಲ ಉಪ್ಪಿನ ಗಣಿಯ ಊರು. ಹಾಲ್‌ಸ್ಟಾಟರ್ ಸೀ ಸರೋವರದ ಸೊಬಗು, ಹಸುರು ಪರ್ವತಾವಳಿಯ ಸಾಲು ಸಾಲು, ವಿಶಿಷ್ಟ ವಿನ್ಯಾಸದ ಮನೆಗಳ ಆಕರ್ಷಣೆ – 'ಮಾತಿಲ್ಲಿ ಮೈಲಿಗೆಯು ಹೊದ್ದು ನಿಲು ಮೌನವನು' ಎನ್ನುವ ದೈವಿಕ ಸೆಳೆತದಲ್ಲಿ ಮುಳುಗುವಂತೆ ಮಾಡಿಬಿಡುವ ಅಪರೂಪದ ಹಳ್ಳಿ.**

**■ ಎಸ್.ಪಿ. ವಿಜಯಲಕ್ಷ್ಮಿ**

ಸಗ್ಗವಿಲ್ಲಿ ಬಗ್ಗಿತೇನೊ ಬುವಿಗೆ ಮುತ್ತನಿಡಲು
ಆಯತಪ್ಪಿ ಬಿದ್ದಿತೇನೊ ಹಾದಿಯಿಲ್ಲ ಮರಳಲು...

ನಮ್ಮ ನಂಬಿಕೆಯಂತೆ ಸ್ವರ್ಗ ಇರುವುದಾದರೆ, ಅದು ಭೂಮಿಗಿಂತ ಸುಂದರವಾಗಿದ್ದರೆ, ಆಗ ಆ ಸ್ವರ್ಗ ಕಾಣಲು ಮೇಲೇ ಹೋಗಬೇಕಿಲ್ಲ. ಭೂಮಿ ಮೇಲಿರುವ ಈ ಪುಟ್ಟ ಹಳ್ಳಿಗೆ ಹೋದರೆ, 'ಇದೇ ಸ್ವರ್ಗ' ಎಂದು ಮೈಮರೆಯುವುದು ಖಚಿತ. ಹಾಗಾಗೇ, ಅಲ್ಲಿ ನಿಂತ ನನಗೆ ಈ ಸಾಲುಗಳನ್ನು ಎದೆಯಾಳದಿಂದ ಹೊರಹಾಕದಿರಲು ಸಾಧ್ಯವಾಗಲೇ ಇಲ್ಲ.

ಆಸ್ಟ್ರಿಯಾ ದೇಶದ ಸಾಲ್ಜ್‌ಮರ್‌ಗಟ್ ಪ್ರದೇಶದಲ್ಲಿದೆ 'ಹಾಲ್‌ಸ್ಟಾಟ್' ಎನ್ನುವ ಪುಟ್ಟ ಹಳ್ಳಿ. ಕಿನ್ನರಲೋಕ ಹೇಗಿರುತ್ತೆ ಎಂದು ಯಾರಾದರೂ ಕೇಳಿದರೆ, ನಾನು ಈ ಹಳ್ಳಿಯನ್ನು ಉದಾಹರಿಸಿ, 'ಇಲ್ಲಿದೆ ನೋಡಿ' ಎನ್ನುತ್ತೇನೆ. ಅಂಥ ಚಿತ್ರಸದೃಶ, ಪರವಶಗೊಳಿಸುವ ಚೆಲುವಿನ ಹಳ್ಳಿ ಸ್ಥಿತಪ್ರಜ್ಞನಂತೆ



ಹಾಲ್‌ಸ್ಟಾಟ್‌ನಲ್ಲಿ ಲೇಖಕಿ